

# ಕಾರಂಜಿಕೆರೆಯಲ್ಲಿ..




■ ಚಿತ್ರ ಬರಹ:

**ಬಿ.ಎಂ.ಲವಕುಮಾರ್**

**ಫೆ**ಬ್ರವರಿ 14 ಬರುತ್ತಿದೆ. ಎಲ್ಲೆಡೆ ಪ್ರೇಮಿಗಳು ತಮ್ಮ 'ದಿನಾಚರಣೆ'ಗೆ ಸಜ್ಜಾಗುತ್ತಿದ್ದಾರೆ. ಮೈಸೂರು ಕಾರಂಜಿಕೆರೆಗೆ ಅಂತಹ ದಿನಾಂಕಗಳ ಬಗ್ಗೆ ಆಸಕ್ತಿ ಇಲ್ಲ. ಅಲ್ಲಿ ವರ್ಷದ 365 ದಿನಗಳೂ ಪ್ರೇಮಿಗಳ ಕಲರವ.

ಕುಳಿತುಕೊಳ್ಳೋದಕ್ಕೆ ಮರದ ನೆರಳು, ಕಲ್ಲು ಎಸೆಯೋದಕ್ಕೊಂದು ತಿಳಿನೀರ ಕೆರೆ, ಬೇಸರ ಆದ್ರೆ ಕೆರೆಗೊಂದು ಸುತ್ತು ಹೊಡೆಯೋಕೆ ಬೋಟಿಂಗ್, ಪ್ರೇಮ ಚೇಷ್ಟೆಗೆ ಹೇಳಿ ಮಾಡಿಸಿದ ಪೊದೆಗಳು– ನಿಜಕ್ಕೂ ಪ್ರೇಮಿಗಳಿಗೆಂದೇ ನಿರ್ಮಾಣವಾಗಿದೆ ಅನ್ನುವಂತಿದೆ– ಮೈಸೂರಿನ ಕಾರಂಜಿಕೆರೆ. ಪ್ರೇಮಿಗಳ ಪಿಕ್‌ನಿಕ್ ತಾಣವಾಗಿ ಗಮನ ಸೆಳೆಯುತ್ತಿರುವ ಕಾರಂಜಿಕೆರೆಯನ್ನು 'ಪ್ರೇಮಿಗಳ ಕೆರೆ' ಅಂದ್ರೂ ತಪ್ಪಾಗಲ್ಲ.

ಹಾಗೆ ನೋಡಿದರೆ, ಕಾರಂಜಿಕೆರೆ ಈಗ ಮೊದಲಿನಂತಿರದೆ ಸಾಕಷ್ಟು ಬದಲಾಗಿದೆ. ಒಂದು ಕ್ಷಣ ಕಣ್ಣು ಹಾಯಿಸಿದರೆ ದೂರದಿಂದ ವಲಸೆ ಬಂದ ಹಕ್ಕಿಗಳು ನೂರಾರು ಕಾಣಸಿಗುತ್ತವೆ. ಹಕ್ಕಿಗಳ ಚಿಲಿಪಿಲಿ ನಡುವೆಯೇ, ಪಾತರಗಿತ್ತಿಗಳು ಎಲ್ಲೆಂದರಲ್ಲಿ ಹಾರಿ ಕಚಗುಳಿ ಇಡುತ್ತವೆ. ಅದಕ್ಕೆಂದೇ ಕೆರೆಯ

**(10ನೇ ಪುಟ ನೋಡಿ)**